ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಸಂಖ್ಯೆ:ಕೈಅ/ಇ3/2009-14ಕೈನೀ/ಅಧಿಸೂಚನೆ/08-09

ನಿರ್ದೇಶಕರವರ ಕಚೇರಿ,
ನಂ.49, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ,
ಬೆಂಗಳೂರು, ದಿ: 16-4-2010

## : ಸು ತ್ತೋ ಲೆ :

ವಿಷಯ : 2009-14ರ ಕೈಗಾರಿಕಾ ನೀತಿಯಂತೆ ಅತಿ ಸಣ್ಣ, ಸಣ್ಣ, ಮಧ್ಯಮ, ಬೃಹತ್ ಮತ್ತು ಮೆಗಾ ಉತ್ಪಾದನಾ ಘಟಕಗಳಿಗೆ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿ ನೀಡುವ ಬಗ್ಗೆ.

ಉಲ್ಲೇಖ :
1. ಸರ್ಕಾರಿ ಆದೇಶ ಸಂಖ್ಯೆ: ಸಿಐ 233.ಎಸ್‌ಪಿಐ.2008 ದಿನಾಂಕ 28-2-2009 ಮತ್ತು ಸೇರ್ಪಡೆ ಆದೇಶ ದಿನಾಂಕ:25-2-2010
2. ಈ ಕಚೇರಿ ಪತ್ರ ಸಂಖ್ಯೆ: ಕೈಅ/ಇ3/ಕೈನೀ/2009-14/ ಮಾರ್ಗಸೂಚಿ/ 2009-10 ದಿನಾಂಕ: 1-7-2009
3. ಈ ಕಚೇರಿ ಪತ್ರ ಸಂಖ್ಯೆ: ಕೈಅ/ಇ3/ಕೈನೀ/2009-14/ ಮಾರ್ಗಸೂಚಿ/2009-10 ದಿನಾಂಕ: 17-7-2009 ಮತ್ತು 18-8-09
4. ಈ ಕಚೇರಿ ಸುತ್ತೋಲೆ ಸಂಖ್ಯೆ: ಕೈಅ/ಇ3/ಕೈನೀ-ಸುತ್ತೋಲೆ/2009-10 ದಿನಾಂಕ: 31-12-09
5. ಈ ಕಚೇರಿ ಸುತ್ತೋಲೆ ಸಂಖ್ಯೆ: ಕೈಅ/ಇ3/ಕೈನೀ/2009-14/ ಮೌಲವರ್ಧಿತ/ಮಾರ್ಗಸೂಚಿ/2009-10 ದಿನಾಂಕ: 20-3-2010
6. ಈ ಕಚೇರಿ ಸುತ್ತೋಲೆ ಸಂಖ್ಯೆ: ಕೈಅ/ಇ3/ಕೈನೀ/09-14/ ಪೇಟೆಂಟ್/ಸುತ್ತೋಲೆ/2010-11 ದಿನಾಂಕ: 7-4-2010
7. ಕಂದಾಯ ಇಲಾಖೆಯ ಅಧಿಸೂಚನೆ ಸಂಖ್ಯೆ: ಕಂಇ/342/ ಮುನೋಮು/2008 ದಿನಾಂಕ: 15-4-2010

--

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರಿ ಆದೇಶದಂತೆ 2009-14ರ ಕೈಗಾರಿಕಾ ನೀತಿ ಜಾರಿಗೊಳಿಸಿದ್ದು, ಅದರಂತೆ ರಾಜ್ಯದಲ್ಲಿ ಹೊಸ ಬಂಡವಾಳ ಹೂಡುವ ಕೈಗಾರಿಕೆಗಳಿಗೆ ವಿವಿಧ ರೀತಿಯ ಉತ್ತೇಜನ ಮತ್ತು ರಿಯಾಯಿತಿ ಸೌಲಭ್ಯಗಳನ್ನು ಒದಗಿಸಿದೆ. ಅದರಂತೆ ವಿವಿಧ ಇಲಾಖೆಗಳಿಂದ ಹೊರಡಿಸಿದ ಪ್ರವೇಶ ತೆರಿಗೆ ವಿನಾಯಿತಿ ಅಧಿಸೂಚನೆ ಮತ್ತು ಇಂಧನ ಇಲಾಖೆಯು ಹೊರಡಿಸಿದ ವಿದ್ಯುಚ್ಛಕ್ತಿ ತೆರಿಗೆ ವಿನಾಯಿತಿ ಅಧಿಸೂಚನೆ ಒಳಗೊಂಡಂತೆ (ಕಂದಾಯ ಇಲಾಖೆಯಿಂದ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿ ಅಧಿಸೂಚನೆ ಹಾಗೂ ಸಹಕಾರ ಇಲಾಖೆಯಿಂದ ಎಪಿಎಂಸಿ ಸೆಸ್ ವಿನಾಯಿತಿ ಅಧಿಸೂಚನೆಗಳನ್ನು ಹೊರತು ಪಡಿಸಿ) ವಿವಿಧ ಉತ್ತೇಜನ ಮತ್ತು ರಿಯಾಯಿತಿಗಳನ್ನು ಮಂಜೂರು ಮಾಡಲು ಉಲ್ಲೇಖಿತ ಪತ್ರಗಳಲ್ಲಿ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

nkr-jd

ಮುಂದುವರೆದಂತೆ ಉಲ್ಲೇಖ (7) ರಲ್ಲಿ ಕಂದಾಯ ಇಲಾಖೆಯು 2009-14ನೇ ಕೈಗಾರಿಕಾ ನೀತಿಯಂತೆ ವಿವಿಧ ಕೈಗಾರಿಕೆಗಳಿಗೆ ಮುದ್ರಾಂಕ ಶುಲ್ಕ ರಿಯಾಯಿತಿ ಮತ್ತು ನೋಂದಣಿ ಶುಲ್ಕ ವಿನಾಯಿತಿ ಮಂಜೂರು ಮಾಡುವ ಬಗ್ಗೆ ದಿನಾಂಕ 15-4-2010 ರಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31-3-2014ರವರೆಗೆ ಜಾರಿಯಲ್ಲಿರುವಂತೆ ಅಧಿಸೂಚನೆಯನ್ನು ಹೊರಡಿಸಿರುತ್ತಾರೆ. ಅಧಿಸೂಚನೆಯ ಪ್ರತಿಯನ್ನು ಸಿದ್ಧ ಮಾಹಿತಿಗಾಗಿ ಲಗತ್ತಿಸಿದೆ. ಈ ಅಧಿಸೂಚನೆಯಂತೆ ಹಾಗೂ ಉಲ್ಲೇಖ (4) ರಲ್ಲಿ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರಗಳಿಗೆ ನೀಡಿರುವ ಅಧಿಕಾರದಂತೆ ಅರ್ಹ ಕೈಗಾರಿಕೆಗಳಿಗೆ ಮಾತ್ರ ಮುದ್ರಾಂಕ ಶುಲ್ಕ ರಿಯಾಯಿತಿ ಮತ್ತು ನೋಂದಣಿ ಶುಲ್ಕ ವಿನಾಯಿತಿ ದೃಢೀಕರಣ ಪತ್ರಗಳನ್ನು ದಿನಾಂಕ:15-4-2010ರಿಂದ ಜಾರಿಗೆ ಬರುವಂತೆ ಈ ಮೂಲಕ ಲಗತ್ತಿಸಿರುವ ಮಾರ್ಗಸೂಚಿಯಂತೆ ನೀಡಲು ಜಿಲ್ಲಾ ಮಟ್ಟದ ಜಂಟಿ ನಿರ್ದೇಶಕರುಗಳು ಕ್ರಮ ವಹಿಸಲು ಸೂಚಿಸಿದೆ. ಅಲ್ಲದೇ ರಾಜ್ಯ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದ ಅರ್ಹ ಕೈಗಾರಿಕಾ ಘಟಕಗಳಿಗೆ ಮುದ್ರಾಂಕ ಶುಲ್ಕ ರಿಯಾಯಿತಿ ಮತ್ತು ನೋಂದಣಿ ಶುಲ್ಕ ವಿನಾಯಿತಿ ಪ್ರಮಾಣ ಪತ್ರ ನೀಡುವ ಬಗ್ಗೆ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಕೇಂದ್ರ ಕಚೇರಿಗೆ ಶಿಫಾರಸ್ಸು ಮಾಡಲು ಸೂಚಿಸಿದೆ.

ಮುಂದುವರೆದಂತೆ, ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕ ರಿಯಾಯಿತಿಗಳ ಬಗ್ಗೆ ಜಿಲ್ಲೆಯಲ್ಲಿ ಹೆಚ್ಚಿನ ಪ್ರಚಾರ ನೀಡಲು ಹಾಗೂ ಈ ಬಗ್ಗೆ ನಡೆಸಲಾಗಿರುವ ಪ್ರಗತಿಯ ಬಗ್ಗೆ ತ್ರೈಮಾಸಿಕ/ ವಾರ್ಷಿಕ ವರದಿಗಳನ್ನು ನಿಗದಿತ ನಮೂನೆಯಲ್ಲಿ ಕೇಂದ್ರ ಕಚೇರಿಗೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ.

ಆಯುಕ್ತರು ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು

<u>ಪ್ರತಿಯನ್ನು ಮಾಹಿತಿ / ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ,ಬೆಂಗಳೂರು -ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಸರ್ಕಾರದ ಕಾರ್ಯದರ್ಶಿಗಳು (ಸಪ್ರಕೈ), ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ತಿಮ್ಮಯ್ಯ ರಸ್ತೆ, ಬೆಂಗಳೂರು-52.
5. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ರೇಸ್ ಕೋರ್ಸ್ ರಸ್ತೆ, ಖನಿಜ ಭವನ, ಬೆಂಗಳೂರು
6. ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ಎಸ್ಐಡಿಸಿ, ರಾಜಾಜಿನಗರ, ಕೈಗಾರಿಕಾ ವಸಾಹತು, ಬೆಂಗಳೂರು-44
7. ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ, ಗಾಂಧಿನಗರ, ಬೆಂಗಳೂರು. – ಇವರ ಮಾಹಿತಿಗೆ ಈ ಬಗ್ಗೆ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತರಲು ಕೋರಲಾಗಿದೆ.
8. ಆಯುಕ್ತರು, ಜವಳಿ ಮತ್ತು ಕೈಮಗ್ಗ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
9. ಅಧ್ಯಕ್ಷರು, ಎಫ್‌ಕೆಸಿಸಿಐ, ಫೆಡರೇಷನ್ ಹೌಸ್, ಅಂಚೆ ಪೆಟ್ಟಿಗೆ ಸಂಖ್ಯೆ 9996, ಕೆ.ಜಿ.ರಸ್ತೆ, ಬೆಂಗಳೂರು.
10. ಅಧ್ಯಕ್ಷರು, ಕಾನ್‌ಫಿಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ (ಸಿ.ಐ.ಐ), ಸದರನ್ ರೀಜನ್-ಕರ್ನಾಟಕ, 12ನೇ ಮೈನ್, ಹೆಚ್.ಎ.ಎಲ್- 2ನೇ ಹಂತ, ಇಂದಿರಾನಗರ, ಬೆಂಗಳೂರು-8.
11. ಅಧ್ಯಕ್ಷರು, ಕಾಸಿಯಾ, 2/106, 17ನೇ ಕ್ರಾಸ್, ಮಾಗಡಿ ರಸ್ತೆ, ವಿಜಯನಗರ, ಬೆಂಗಳೂರು-44.

nkr-jd

12. ಅಧಿಕ ನಿರ್ದೇಶಕರು (ಆಡಳಿತ / ಎಂಎಸ್‌ಎಂಇ / ವಿತ್ತ / ಜಿಕೈಕೇ), ಕೈವಾಇ, ಕೇಂದ್ರ ಕಚೇರಿ, ಬೆಂಗಳೂರು
13. ಮುಖ್ಯ ಕಾರ್ಯ ನಿರ್ವಾಹಕರು ಹಾಗೂ ಕಾರ್ಯಕಾರಿ ಸದಸ್ಯರು, ಕೆಐಎಡಿಬಿ, ನೃಪತುಂಗ ರಸ್ತೆ, ಬೆಂಗಳೂರು.
14. ಮುಖ್ಯ ಸಲಹೆಗಾರರು, ಟೆಕ್ಸಾಕ್, ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು
15. ಆಪ್ತ ಕಾರ್ಯದರ್ಶಿಗಳು, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು, ವಿಧಾನಸೌಧ, ಬೆಂಗಳೂರು.
16. ಆಪ್ತ ಕಾರ್ಯದರ್ಶಿಗಳು, ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು, ವಿಧಾನಸೌಧ, ಬೆಂಗಳೂರು.
17. ನಿರ್ದೇಶಕರು(ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
18. ಜಂಟಿ ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
19. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, 3ನೇ ಮಹಡಿ, ಬೆಂಗಳೂರು.
20. ವ್ಯವಸ್ಥಾಪಕ ನಿರ್ದೇಶಕರು, ಪಿ.ಐ.ಟಿ.ಸಿ, ಕಸ್ತೂರಬಾ ರಸ್ತೆ, ಬೆಂಗಳೂರು–1.
21. ವ್ಯವಸ್ಥಾಪಕ ನಿರ್ದೇಶಕರು, ಕೆ.ಸಿ.ಟಿ.ಯು, ಬಸವ ಭವನ, ಬೆಂಗಳೂರು.
22. ಜಂಟಿ ನಿರ್ದೇಶಕರು (ಯೋಜನೆ / ಎಇಪಿ), ಕೇಂದ್ರ ಕಚೇರಿ, ಬೆಂಗಳೂರು.
23. ಸಹಾಯಕ ನಿರ್ದೇಶಕರು (ವಾರ್ತೆ), ಕೈವಾಇ, ಕೇಂದ್ರ ಕಚೇರಿ, ಬೆಂಗಳೂರು.
24. ಉಪ ನಿರ್ದೇಶಕರು( ಖಾದಿ ಮತ್ತು ಗ್ರಾಮಾಂತರ) ಜಿಲ್ಲಾ ಕೈಗಾರಿಕಾ ಕೇಂದ್ರ, ____________
25. ಉಪ ನಿರ್ದೇಶಕರು (ವಿತ್ತ)/ (ಕೈ.ಅ)/ (ಎಂಎಸ್‌ಎಂಇ)/ (ಜಿಕೈಕೆ)/ (ಆಡಳಿತ)/ (ನಿರೀಕ್ಷಣೆ) (ಅಂಕಿಅಂಶ)/ ಕೇಂದ್ರ ಕಚೇರಿ, ಬೆಂಗಳೂರು.
26. ಲೆಕ್ಕಾಧಿಕಾರಿಗಳು, (ಲೆಕ್ಕಪತ್ರ)/ (ಲೆಕ್ಕ ಪರಿಶೋಧನೆ), ಕೇಂದ್ರ ಕಚೇರಿ, ಕಚೇರಿ ಪ್ರತಿ.
27. ಸಹಾಯಕ ನಿರ್ದೇಶಕರು (ವಿತ್ತ)/ (ಕೈ.ಅ)/ (ಎಂಎಸ್‌ಎಂಇ)/ (ಜಿಕೈಕೆ)/ (ಅಂಕಿ ಅಂಶ)/ (ನಗದು ಮತ್ತು ಸಮನ್ವಯ), ಕೇಂದ್ರ ಕಚೇರಿ, ಬೆಂಗಳೂರು.
28. ಕಚೇರಿ ಪ್ರತಿ.

nkr-jd

## 5. EXEMPTION FROM PAYMENT OF STAMP DUTY & CONCESSIONAL REGISTRATION CHARGES UNDER 2009-14 POLICY.

Stamp duty to be paid in respect of loan agreements, credit deeds, mortgage and hypothecation deeds executed for availing only term loans from State Govt. and/or State Financial Corporation, Industrial Investment Development Corporation, National Level Financial Institutions, Commercial Banks, RRBs, Co-operative Banks, KVIB/KVIC, Karnataka State SC/ST Development Corporation [Now Dr.B.R.Ambdekar Development Corporation], Karnataka State Minority Development Corporation and other institutions which may be notified by the Government from time to time for the initial period of [5] **five years** and for lease deeds, lease-cum-sale and absolute sale deeds executed by industrial Enterprises in respect of industrial plots, sheds, industrial tenements, by KIADB, KSSIDC, KEONICS, KSIIDC, Industrial Co-operatives and approved private industrial estates shall be exempted for Manufacturing Micro, Small and Medium Enterprises and Selected Service Enterprises listed at **Annexure-2**; Large and Mega industries both for establishment of new enterprises or for expansion, diversification and modernization of existing industries as below:

| | |
|---|---|
| Zone-1 | 100% |
| Zone-2 | 100% |
| Zone-3 | 75% |
| Zone-4 | Nil |

For all loan documents & Sale deeds as specified above, the Registration charges shall be available at a concessional rate of Rs.1 per Rs.1000.

The exemption of stamp duty and concessional registration charges are also applicable to lands purchased under Section 109 of the KLR Act and also for direct purchase of industrially converted lands for the projects approved by SHLCC / SLSWCC / DLSWCC. This incentive will also be applicable for the land transferred by KIADB to land owners as compensation for the land acquired.

The exemption of stamp duty and concessional registration charges are also available for registration of final sale deed in respect of lands, sheds, plots, industrial tenements after the expiry of lease period at the rate as specified in the Industrial Policy which was in vogue at the time of execution of lease-cum-sale deed.

NOTE:

- Joint Directors, District Industries Centres, shall file quarterly statements to Head Office in respect of Stamp Duty Exemptions issued to MSMEs and SLSWCC cases in the prescribed format as in **Annexure – 29.**

5.1 Procedure to claim Stamp Duty Exemption & Concessional Registration Charges:

The eligible enterprises shall apply to the officers mentioned below along with the required documents.

| Sector | Officer with whom the application to be filed. |
|---|---|
| Micro, Small and Medium Enterprises and the large projects cleared by SLSWCC Meetings | Joint Director, District Industries Centre. |
| Large and Mega industrial projects cleared by SHLCC | Director, Department of Industries & Commerce |

The documents to be furnished by the enterprise for claiming stamp duty exemption and concessional registration charges are given below:

a. Application in plain paper / letterhead.
b. Copy of the IEM acknowledgement part I/II or industrial license.
c. Copy of Term loan sanction order in case of loan agreements, credit deeds, mortgage and hypothecation deeds. OR
d. Copy of Shed / land allotment order, possession certificate, lease deed/lease-cum-sale/absolute sale deed in case of industrial land / plots/sheds allotted by KIADB/KSSIDC/ KEONICS/ KSIIDC/ Industrial Co-operatives/ approved private industrial estates.
e. Copy of Revenue Department permission & other related documents for purchase of land under section 109 of KLR Act.
f. Copy of Project Report duly signed by the promoter.
g. Copy of single window clearance committee approvals obtained by individual enterprises if any.

The concerned office after verification of eligibility of the enterprise has to issue the Stamp duty exemption & Concessional Registration Charges certificate to the enterprise in accordance with the Revenue Departments notifications and in prescribed format as in **Annexure-17 (A or B)**. However, while purchasing the converted land, the Stamp Duty Exemption and concessional registration charges shall be extended only if the same is not claimed earlier.

ANNEXURE-17 A

**Format for issue of Stamp Duty Exemption Certificate under 2009-14 policy for Loan documents.**

Government of Karnataka
Department of Industries & Commerce

No:

Office of the Director/
Joint Director, District Industries Centre
-----------
-----------
Dated:

**CERTIFICATE**

Subject : Exemption of stamp duty and concessional registration charges to M/s.....................................................

Ref : 1. G.O.No.CI 233 SPI 2008, Dated 28-02-2009 and 25.2.2010
2. Revenue Department Notification No.RD 342 Munomu 2008 Dt. 15.4.2010
3. Units letter No. and Date

This is to certify that;

(i) M/s.________________________ represented by Sri ____________________________ Proprietor, Partner/Managing Directorate/ Director is a new industrial enterprise/ enterprise undertaking new industrial investment under Expansion/ Diversification/ Modernisation, which has been issued with IEM acknowledgement from District Industries Centre/Govt. of india vide No.______________________________ dated___________________for manufacture of _____________________.

(ii) This industrial enterprise is located in Zone ___________ in terms of the 2009-14 package of Incentives and Concessions vide GO.No.CI.233/SPI/2008 dated: 28-2-2009 and 25.2.2010 has been categorised at Micro/small/medium/large/mega enterprise.

(iii) The industrial enterprise has been sanctioned financial assistance i.e term loan of Rs.________ by _______________ (mention financing agency) for establishment of a enterprise for manufacture of __________________ with a project cost of Rs.______________.

(iv) The enterprises proposal is also approved in the DLSWCC/SLSWCC/SHLCC vide letter dated_______________

(v) Certified that this enterprise is eligible for exemption from payment of stamp duty to an extent of 100% / 75% and reduction in Registration charges to Rs.1/- only for

every Rs. 1000/- value in respect of loan agreements/ credit deeds/ mortgage/ hypothecation deeds executed for availing term loans.

(vi) It is further certified that the enterprise is not one among the 25 categories of industries listed as ineligible in **Annexure 4** of the Package of Incentives and Concessions 2009-14 vide GO No. CI.233/SPI/2008 dated 28-2-2009.

Joint Director, DIC or
Director, Industries and Commerce Department.

ANNEXURE-17 B

Format for issue of Stamp Duty Exemption Certificate under 2009-14 policy for Land/ Plot registration.

Government of Karnataka
Department of Industries & Commerce

No:

Office of the Director/
Joint Director, District Industries Centre
-----------
-----------
Dated:

## CERTIFICATE

Subject : Exemption of stamp duty and concessional registration charges to M/s.......................................................

Ref : i. G.O.No. CI.233.SPI.2008 Bangalore Dtd : 28-2-2009 and 25.2.2010
ii R.D.Notification No.RD 342 Munomu 2008 dt.15.4.2010
iii. Letter from M/s ..........................
iv. Allotment letter No.: ........................................

This is to certify that;

(i) M/s.________________ represented by Sri ________________ Proprietor, Partner/Managing Directorate/ Director is a new industrial enterprise/ enterprise undertaking new industrial investment under Expansion/ Diversification/ Modernisation, which has been issued with IEM acknowledgement from District Industries Centre/Govt. of India vide No.________________ dated________________for manufacture of ________________.

(ii) This industrial enterprise is located in Zone __________ in terms of the 2009-14 package of Incentives and Concessions vide GO.No.CI.233/SPI/2008 dated: 28-2-2009 and has been categorised at Micro/ small/ medium/ large/mega enterprise.

(iii) The enterprise has been allotted an industrial plot/shed tenements measuring __________ Sq.mtrs/ Acres by the Karnataka Indl.Areas Development Board/ KSSIDC/ KEONICS/ KSIIDC/ industrial cooperatives and approved private industrial estates for establishment of the industry at __________industrial area, vide Allotment Letter/Order No.__________ dated __________.
The enterprise has purchased .......... sq. mtrs/ acres of land under Section 109 of

KLR Act / The enterprise has purchased ..... sq. mtrs of industrial converted land with the approval of DLSWCC/SLSWCC/SHLCC.

(iv) The DLSWCC/SLSWCC/SHLCC has approved the project proposal of the enterprise vide their letter No__________________

(v) Certified that as per item (iii) above, the enterprise is eligible for exemption of stamp duty to an extent of 100%/75% and reduction of registration charges to Re.1 per thousand in respect of lease deed, lease-cum sale and absolute sale deeds.

(vi) It is further certified that the enterprise is not one among the 25 categories of industries listed as ineligible in **Annexure-4** of the Package of Incentives and Concessions 2009-14 vide GO No.CI 733 SPI 2008 dated 28-02-2009.

Director, Industries and Commerce Department/
Joint Director, District Industries Centre ..........

**ANNEXURE – 29**

# FORMAT FOR FILING QUARTERLY STATEMENT TO HEADOFFICE IN RESPECT OF STAMP DUTY EXEMPTION ISSUED TO MSMEs (i.e.,quarter ending as on ............)
# UNDER 2009-14 POLICY

**PART – A:** In respect registration of land/ plot documents.

| Sl No. | Name and address of the enterprise | Product | Purchased form whom | Area of plot/shed | Category of the enterprise (SC/ST/ PH/ Women/ Ex-Servicemen) | Sale deed value of plot/shed. |
|---|---|---|---|---|---|---|
| 1 | 2 | 3 | 4 | 5 | 6 | 7 |

| Whether micro/ small/ medium | Location (i.e., zone) and policy | Percentage of Stamp Duty Exemption extended. | Date of SDE Certificate | New or expansion | Remarks. |
|---|---|---|---|---|---|
| 8 | 9 | 10 | 11 | 12 | 13 |

1. Certified that the above enterprises are actually eligible for Stamp Duty Exemption.
2. Certified that the above enterprises have been issued with Stamp Duty Exemption after obtaining all the required documents.

JD, DIC.,,,,,,,,, DISTRICT.

**PART – A:** In respect of registration of Loan documents.

| Sl No. | Name and address of the enterprise | Product | Name of the Bank | Loan Amount | Category of the enterprise (SC/ST/ PH/ Women/ Ex-Servicemen) | Sale deed value of plot/shed. |
|---|---|---|---|---|---|---|
| 1 | 2 | 3 | 4 | 5 | 6 | 7 |

| Whether micro/ small/ medium | Location (i.e., zone) and policy | Percentage of Stamp Duty Exemption extended. | Date of SDE Certificate | New or expansion | Remarks. |
|---|---|---|---|---|---|
| 8 | 9 | 10 | 11 | 12 | 13 |

3. Certified that the above enterprises are actually eligible for Stamp Duty Exemption.
4. Certified that the above enterprises have been issued with Stamp Duty Exemption after obtaining all the required documents.

JD, DIC.,,,,,,,,, DISTRICT.

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 342 ಮುನೋಮು 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15.04.2010.

## ಅಧಿಸೂಚನೆ

ದಿನಾಂಕ:26.08.2006 ರ ಸರ್ಕಾರದ ಆದೇಶ ಸಂಖ್ಯೆ: ಸಿಐ 319 ಎಸ್‌ಪಿಐ 2005 ರಲ್ಲಿ 2006-2011 ರವರೆಗೆ ಜಾರಿಯಲ್ಲಿರುವಂತೆ, ಕೈಗಾರಿಕಾ ನೀತಿಯನ್ನು ಪ್ರಕಟಿಸಲಾಗಿದ್ದು, ಈ ನೀತಿಯನ್ವಯ ಹೊಸದಾಗಿ ಸ್ಥಾಪಿಸಲಾಗುವ ಸಣ್ಣ, ಮಧ್ಯಮ, ದೊಡ್ಡ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ ಕರ್ನಾಟಕ ಮುದ್ರಾಂಕ ಕಾಯಿದೆ 1957 (1957 ರ 34ನೇ ಕರ್ನಾಟಕ ಕಾಯಿದೆ) ಕಲಂ 9 ರ ಉಪ ಕಲಂ (1) ರಲ್ಲಿ ಹಾಗೂ ನೋಂದಣಿ ಕಾಯಿದೆ 1908 (ಕೇಂದ್ರೀಯ ಕಾಯ್ದೆ 1908 XVI ನೇ ಕಾಯ್ದೆ) ಕಲಂ 78 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ:01.04.2006 ರಿಂದ 31.03.2011 ರವರೆಗೆ ಜಾರಿಯಲ್ಲಿರುವಂತೆ, ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ಕಡಿತ ನೀಡಲು ಅಧಿಸೂಚನೆ ಸಂಖ್ಯೆ: ಕಂಇ 198 ಮುನೋಮು 2007, ದಿನಾಂಕ:26.05.2007 ರಲ್ಲಿ ಮತ್ತು ದಿನಾಂಕ:17.12.2007 ರಲ್ಲಿ ಆದೇಶ ಹೊರಡಿಸಲಾಗಿತ್ತು.

2. ಮುಂದುವರೆದಂತೆ, ಸರ್ಕಾರದ ಆದೇಶ ಸಂಖ್ಯೆ: ಸಿಐ 233 ಎಸ್‌ಪಿಐ 2008, ದಿನಾಂಕ:28.02.2009 ಮತ್ತು 25.02.2010 ರಂತೆ, 2009-14 ರವರೆಗೆ ಜಾರಿಯಲ್ಲಿರುವಂತೆ, ಹೊಸ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಿದ್ದು, ಈ ಕೈಗಾರಿಕಾ ನೀತಿಯನ್ವಯ ಹೊಸದಾಗಿ ಸ್ಥಾಪಿಸಲಾಗುವ (ಹಾಲಿ ಉದ್ಯಮಿಗಳು ಕೈಗೊಳ್ಳುವ ವಿಸ್ತರಣೆ / ನವೀಕರಣ / ವೈವಿಧ್ಯೀಕರಣ ಯೋಜನೆಗಳು ಸೇರಿದಂತೆ) ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ, ಬೃಹತ್ ಮತ್ತು ಮೆಗಾ ಉದ್ಯಮಗಳಿಗೆ ಉತ್ತೇಜನ ನೀಡುವ ದೃಷ್ಟಿಯಿಂದ, ಈಗಾಗಲೇ ಹೊರಡಿಸಿರುವ ಅಧಿಸೂಚನೆ ಸಂಖ್ಯೆ: ಕಂಇ 198 ಮುನೋಮು 2007, ದಿನಾಂಕ: 26.05.2007 ಮತ್ತು ದಿನಾಂಕ:17.12.2007 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂತೆಗೆದುಕೊಂಡು, ಕರ್ನಾಟಕ ಮುದ್ರಾಂಕ ಕಾಯಿದೆ, 1957 (1957 ರ 37ನೇ ಕರ್ನಾಟಕ ಕಾಯಿದೆ) ಕಲಂ 9ರ ಉಪ ಕಲಂ(1) ರಲ್ಲಿ ಹಾಗೂ ನೋಂದಣಿ ಕಾಯಿದೆ 1908 (ಕೇಂದ್ರೀಯ ಕಾಯ್ದೆ 1908 XVI ನೇ ಕಾಯ್ದೆ) ಕಲಂ 78 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹೊಸ ಕೈಗಾರಿಕಾ ನೀತಿ 2009-14 ರಲ್ಲಿ ನಿರ್ದಿಷ್ಟಪಡಿಸಿದಂತೆ, ಅನುಬಂಧ-1 ರಲ್ಲಿರುವ ವಲಯ -1, 2 ಮತ್ತು 3 ರಲ್ಲಿ ಸ್ಥಾಪಿಸಲಾಗುವ ಉದ್ಯಮಿಗಳಿಗೆ ಈ ಕೆಳಕಂಡ ಮುದ್ರಾಂಕ ಶುಲ್ಕದಲ್ಲಿ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ಕಡಿತ ನೀಡಿ ಆದೇಶಿಸಿದೆ. ವಲಯ 4 ಕ್ಕೆ ಯಾವುದೇ ವಿನಾಯಿತಿ / ರಿಯಾಯಿತಿ ಇರುವುದಿಲ್ಲ.

ಅ) ರಾಜ್ಯ ಸರ್ಕಾರ ಮತ್ತು/ಅಥವಾ ರಾಜ್ಯ ಹಣಕಾಸು ಸಂಸ್ಥೆ, ರಾಜ್ಯ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ರಾಷ್ಟ್ರ ಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಮತ್ತು ಗ್ರಾಮೋದ್ಯೋಗ ಕಮಿಷನ್, ಕರ್ನಾಟಕ ಪರಿಶಿಷ್ಟ ಜಾತಿ / ಪಂಗಡಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಅಧಿಸೂಚನೆ ಮೂಲಕ ಹೊರಡಿಸಿರುವ ವಿತ್ತ ಸಂಸ್ಥೆಗಳಿಂದ ಅವಧಿ ಸಾಲ ಪಡೆಯಲು ಮಾಡಿಕೊಳ್ಳುವ ಸಾಲ ಕರಾರು, ಕ್ರೆಡಿಟ್ ಡೀಡ್, ಅಡಮಾನ ಪತ್ರಗಳಿಗೆ ಮೊದಲು ಐದು ವರ್ಷಗಳಿಗೆ ಮಾತ್ರ. ಮುದ್ರಾಂಕ ಶುಲ್ಕದಲ್ಲಿ ವಲಯ (1) ಮತ್ತು (2) ರಲ್ಲಿ ಶೇ.100 ರಷ್ಟು ಹಾಗೂ ವಲಯ (3) ರಲ್ಲಿ ಶೇ.75 ರಷ್ಟು ವಿನಾಯಿತಿ ನೀಡಿದೆ.

ಆ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ, ಕರ್ನಾಟಕ ವಿದ್ಯುನ್ಮಾನ ಅಭಿವೃದ್ಧಿ ನಿಗಮ, ಕರ್ನಾಟಕ ಕೈಗಾರಿಕಾ ಬಂಡವಾಳ ಹೂಡಿಕೆ ಮತ್ತು ಅಭಿವೃದ್ಧಿ ನಿಗಮ, ಕೈಗಾರಿಕಾ ಸಹಕಾರ ಸಂಸ್ಥೆಗಳು ಮತ್ತು ಅಂಗೀಕೃತ ಖಾಸಗಿ ಕೈಗಾರಿಕಾ ವಸಾಹತುಗಳ ಜೊತೆ ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡವನ್ನು ಪಡೆಯಲು ಉದ್ಯಮಗಳು ಮಾಡಿಕೊಳ್ಳುವ ಗುತ್ತಿಗೆ ಪತ್ರ, ಗುತ್ತಿಗೆಯ ಕ್ರಯಪತ್ರ, ಶುದ್ಧ ಕ್ರಯಪತ್ರ ಮೊದಲಾದ ದಸ್ತಾವೇಜುಗಳಿಗೆ ಮುದ್ರಾಂಕ ಶುಲ್ಕದಲ್ಲಿ ವಲಯ (1) ಮತ್ತು (2) ರಲ್ಲಿ ಶೇ. 100 ರಷ್ಟು ಮತ್ತು ವಲಯ(3) ರಲ್ಲಿ ಶೇ. 75 ರಷ್ಟು ವಿನಾಯಿತಿ ನೀಡಿದೆ.

ಇ) ಕರ್ನಾಟಕ ಭೂ ಸುಧಾರಣೆ ಕಾಯಿದೆ, 1961 ರ ಸೆಕ್ಷನ್ 109 ರ ನಿಯಮದ ಪ್ರಕಾರ ಖರೀದಿಸುವ ಜಮೀನಿಗೆ ಮತ್ತು SHLCC/SLSWCC/DLSWCC ಗಳಿಂದ ಅನುಮೋದಿತವಾದ ಉದ್ಯಮಗಳು ಕೈಗಾರಿಕೋದ್ದೇಶಗಳಿಗೆ ಪರಿವರ್ತಿತವಾದ ಜಮೀನನ್ನು ಖರೀದಿಸಲು ಮತ್ತು ಭೂ ಮಾಲೀಕರಿಗೆ ಭೂ ಸ್ವಾಧೀನ ಪಡಿಸಿಕೊಂಡಿದ್ದಕ್ಕೆ ಪರಿಹಾರವಾಗಿ ಕೆ.ಐ.ಎ.ಡಿ.ಬಿ.ಯಿಂದ ವರ್ಗಾಯಿಸುವ ಜಮೀನು ಪತ್ರಗಳಿಗೂ ಸಹ ಮುದ್ರಾಂಕ ಶುಲ್ಕದಲ್ಲಿ ವಲಯ (1) ಮತ್ತು (2) ರಲ್ಲಿ ಶೇ. 100 ರಷ್ಟು ಮತ್ತು ವಲಯ (3) ರಲ್ಲಿ ಶೇ. 75 ರಷ್ಟು ವಿನಾಯಿತಿ ನೀಡಿದೆ.

ಈ) <u>ನೋಂದಣಿ ಶುಲ್ಕದಲ್ಲಿ ರಿಯಾಯಿತಿ</u> – ಮೇಲ್ಕಂಡ (ಅ) ರಿಂ (ಇ) ವರೆಗಿನ ಎಲ್ಲಾ ದಸ್ತಾವೇಜುಗಳಿಗೆ ಪ್ರತಿ 1,000/-ರೂ.ಗಳ ಮೌಲ್ಯಕ್ಕೆ ಒಂದು ರೂಪಾಯಿಯಂತೆ ನೋಂದಣಿ ಶುಲ್ಕ ವಿಧಿಸುವುದು.

3. ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ / ರಿಯಾಯಿತಿ ಪಡೆಯಲು ಅನುಬಂಧ 2 ಹಾಗೂ 3 ರಲ್ಲಿ ನಿಗದಿಪಡಿಸಿರುವಂತೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಪ್ರಪತ್ರವನ್ನು ದಸ್ತಾವೇಜು ನೋಂದಣಿ ಸಮಯದಲ್ಲಿ ಒದಗಿಸುವುದು. ಈ ಪ್ರಪತ್ರದಲ್ಲಿ ಪ್ರಮಾಣೀಕರಿಸಿದ ಮಾಹಿತಿಯ ಆಧಾರದ ಮೇಲೆ ಮಾತ್ರ ಮುದ್ರಾಂಕ ಶುಲ್ಕ / ನೋಂದಣಿ ಶುಲ್ಕ ರಿಯಾಯಿತಿ ನೀಡುವ ಬಗ್ಗೆ ಪರಿಶೀಲಿಸಿ ದಸ್ತಾವೇಜುಗಳನ್ನು ನೋಂದಣಿ ಮಾಡತಕ್ಕದ್ದು.

4. ಮೇಲೆ ಸೂಚಿಸಲಾದ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ರಿಯಾಯಿತಿ ದರದ ನೋಂದಣಿ ಶುಲ್ಕವು ಕೈಗಾರಿಕಾ ನಿವೇಶನ, ಷೆಡ್ಡುಗಳು, ಕೈಗಾರಿಕಾ ಕಟ್ಟಡಗಳು ಮೊದಲಾದವುಗಳ ಲೀಸ್-ಕಂ-ಸೇಲ್ ಕರಾರಿನ ಅವಧಿ ಮುಗಿದ ಬಳಿಕ ಮಾಡಿಕೊಳ್ಳಲಾಗುವ ಅಂತಿಮ ಕ್ರಯ ಪತ್ರಕ್ಕೂ ಅನ್ವಯವಾಗುತ್ತದೆ. ಈ ಹಿಂದೆ ಲೀಸ್-ಕಂ-ಸೇಲ್ ಡೀಡ್ ಮಾಡಿಕೊಂಡಾಗ ಚಾಲ್ತಿಯಲ್ಲಿದ್ದ ಕೈಗಾರಿಕಾ ನೀತಿಯ ಪ್ರಕಾರ ನಿಗದಿಪಡಿಸಿರುವ ದರ ಅನ್ವಯಿಸತಕ್ಕದ್ದು.

5. ಈ ಮೇಲೆ ನೀಡಲಾಗುವ ಮುದ್ರಾಂಕ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿನ ಕಡಿತವು ಅನುಬಂಧ-4 ರಲ್ಲಿ ನಮೂದಿಸಿರುವ 25 ಕೈಗಾರಿಕಾ ಚಟುವಟಿಕೆಗಳಿಗೆ ಅನ್ವಯಿಸುವುದಿಲ್ಲ.

6. ಈ ವಿನಾಯಿತಿ / ರಿಯಾಯಿತಿಯು ಅಧಿಸೂಚನೆಯ ದಿನಾಂಕದಿಂದ ದಿನಾಂಕ: 31.03.2014 ರವರೆಗೆ ಮಾತ್ರ ಲಭ್ಯವಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಕೆ.ರಾಮಚಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ 1000 ಪ್ರತಿಗಳನ್ನು ಒದಗಿಸಲು ಕೋರಿದೆ.

..3..

ಪ್ರತಿ:

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಬೆಂಗಳೂರು.
4) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
5) ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ – ಇಲಾಖೆಯ ಎಲ್ಲಾ ಜಂಟಿ ನಿರ್ದೇಶಕರು ಹಾಗೂ ಉಪ ನಿರ್ದೇಶಕರುಗಳಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಿ ಕೊಡುವಂತೆ ನಿರ್ದೇಶನ ನೀಡಲಾಗಿದೆ.
6) ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು / ಎಲ್ಲಾ ಉಪ ನೋಂದಣಾಧಿಕಾರಿಗಳು – ನೋಂದಣಿ ಮಹಾಪರಿವೀಕ್ಷಕರ ಮುಖಾಂತರ.
7) ಮಾನ್ಯ ಕಂದಾಯ / ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಇವರ ಪತ್ರಾಂಕಿತ ಆಪ್ತ ಸಹಾಯಕರು.
9) ಸರ್ಕಾರದ ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಆಪ್ತ ಸಹಾಯಕರು.
10) ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.

ಅನುಬಂಧ - 1

## ಉತ್ತೇಜನ ಮತ್ತು ರಿಯಾಯತಿಗಳನ್ನು ನೀಡಲು ತಾಲೂಕುಗಳ ವಲಯವಾರು ವರ್ಗೀಕರಣ

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ತಾಲೂಕುಗಳ ಸಂಖ್ಯೆ | ವಲಯ-೧ ಅತ್ಯಂತ ಹಿಂದುಳಿದ ತಾಲೂಕುಗಳು | ವಲಯ-೨ ಅತಿ ಹಿಂದುಳಿದ ತಾಲೂಕುಗಳು | ವಲಯ-೩ ಹಿಂದುಳಿದ ತಾಲುಕುಗಳು | ವಲಯ-೪ ಕೈಗಾರಿಕೆಯಲ್ಲಿ ಮುಂದಿರುವ ತಾಲುಕುಗಳು |
|---|---|---|---|---|---|---|
| ೧. | ಬೆಂಗಳೂರು ನಗರ | ೪ | | | | ಆನೇಕಲ್,<br>ಬೆಂಗಳೂರು ಉತ್ತರ<br>ಬೆಂಗಳೂರು (ದಕ್ಷಿಣ)<br>ಬೆಂಗಳೂರು (ಪೂರ್ವ) |
| ೨. | ಬೆಂಗಳೂರು ಗ್ರಾಮಾಂತರ | ೪ | | | | ದೇವನಹಳ್ಳಿ<br>ದೊಡ್ಡಬಳ್ಳಾಪುರ<br>ಹೊಸಕೋಟೆ<br>ನೆಲಮಂಗಲ |
| ೩ | ರಾಮನಗರ | ೪ | ಕನಕಪುರ,<br>ಮಾಗಡಿ | | | ರಾಮನಗರ ಚೆನ್ನಪಟ್ಟಣ |
| ೪ | ಚಿತ್ರದುರ್ಗ | ೬ | ಹೊಸದುರ್ಗ | ಹಿರಿಯೂರು,<br>ಮೊಳಕಾಲ್ಮೂರು<br>ಹೊಳಲಕೆರೆ<br>ಚಳ್ಳಕೆರೆ | ಚಿತ್ರದುರ್ಗ | |
| ೫ | ದಾವಣಗೆರೆ | ೬ | ಚೆನ್ನಗಿರಿ<br>ಹರಪನಹಳ್ಳಿ | ಹೊನ್ನಾಳಿ<br>ಜಗಳೂರು | ದಾವಣಗೆರೆ<br>ಹರಿಹರ | |
| ೬ | ಚಿಕ್ಕಬಳ್ಳಾಪುರ | ೬ | ಬಾಗೇಪಲ್ಲಿ | ಗುಡಿಬಂಡೆ<br>ಗೌರಿಬಿದನೂರು | ಚಿಕ್ಕಬಳ್ಳಾಪುರ<br>ಶಿಡ್ಲಘಟ್ಟ<br>ಚಿಂತಾಮಣಿ | |
| ೭ | ಕೋಲಾರ | ೫ | | ಮುಳಬಾಗಿಲು | ಕೋಲಾರ<br>ಬಂಗಾರಪೇಟೆ<br>ಶ್ರೀನಿವಾಸಪುರ<br>ಮಾಲೂರು | |
| ೮ | ಶಿವಮೊಗ್ಗ | ೭ | | ಸೊರಬ | ಶಿವಮೊಗ್ಗ<br>ಭದ್ರಾವತಿ<br>ಸಾಗರ<br>ಶಿಕಾರಿಪುರ<br>ಹೊಸನಗರ<br>ತೀರ್ಥಹಳ್ಳಿ | |
| ೯ | ತುಮಕೂರು | ೧೦ | ಕುಣಿಗಲ್<br>ಮಧುಗಿರಿ<br>ಗುಬ್ಬಿ, ಶಿರಾ,<br>ಪಾವಗಡ | ತುರುವೇಕೆರೆ<br>ಕೊರಟಗೆರೆ<br>ಚಿಕ್ಕನಾಯಕನಹಳ್ಳಿ | ತುಮಕೂರು<br>ತಿಪಟೂರು | |

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ತಾಲೂಕುಗಳ ಸಂಖ್ಯೆ | ವಲಯ-೧ ಅತ್ಯಂತ ಹಿಂದುಳಿದ ತಾಲೂಕುಗಳು | ವಲಯ-೨ ಅತಿ ಹಿಂದುಳಿದ ತಾಲೂಕುಗಳು | ವಲಯ-೩ ಹಿಂದುಳಿದ ತಾಲುಕುಗಳು | ವಲಯ-೪ ಕೈಗಾರಿಕೆಯಲ್ಲಿ ಮುಂದಿರುವ ತಾಲುಕುಗಳು |
|---|---|---|---|---|---|---|
| ೧೦ | ಚಾಮರಾಜ - ನಗರ | ೪ | ಚಾಮರಾಜ ನಗರ | ಗುಂಡ್ಲುಪೇಟೆ<br>ಕೊಳ್ಳೇಗಾಲ | ಯಳಂದೂರು | |
| ೧೧ | ಚಿಕ್ಕಮಗಳೂರು | ೭ | | ಕಡೂರು | ಚಿಕ್ಕಮಗಳೂರು<br>ತರಿಕೆರೆ<br>ಶೃಂಗೇರಿ<br>ಮೂಡಿಗೆರೆ<br>ಕೊಪ್ಪ,<br>ಎನ್ ಆರ್ ಪುರ | |
| ೧೨ | ದಕ್ಷಿಣಕನ್ನಡ | ೫ | | | ಬಂಟ್ವಾಳ<br>ಮಂಗಳೂರು (ಕಾರ್ಪೋರೇಷನ್ ಪರಿಮಿತಿ ಹೊರತಾಗಿ)<br>ಪುತ್ತೂರು<br>ಸುಳ್ಯ<br>ಬೆಳ್ತಂಗಡಿ | ಮಂಗಳೂರು (ಕಾರ್ಪೋರೇಷನ್ ಪರಿಮಿತಿ) |
| ೧೩ | ಹಾಸನ | ೮ | | ಅರಕಲಗೂಡು | ಹಾಸನ<br>ಅರಸಿಕೆರೆ<br>ಚೆನ್ನರಾಯ ಪಟ್ಟಣ,<br>ಹೊಳೆನರಸಿಪುರ<br>ಬೇಲೂರು<br>ಆಲೂರು<br>ಸಕಲೇಶಪುರ | |
| ೧೪ | ಕೊಡಗು | ೩ | | | ಮಡಿಕೇರಿ<br>ಸೋಮವಾರ-ಪೇಟೆ,<br>ವಿರಾಜಪೇಟೆ | |
| ೧೫ | ಮಂಡ್ಯ | ೭ | | ಮಳವಳ್ಳಿ,<br>ನಾಗಮಂಗಲ<br>ಕೆ ಆರ್ ಪೇಟೆ | ಮಂಡ್ಯ<br>ಮದ್ದೂರು<br>ಶ್ರೀರಂಗಪಟ್ಟಣ<br>ಪಾಂಡವಪುರ | |
| ೧೬ | ಮೈಸೂರು | ೭ | ಹೆಗ್ಗಡ ದೇವನಕೋಟೆ | ಹುಣಸೂರು<br>ಟಿ.ನರಸೀಪುರ<br>ನಂಜನಗೂಡು | ಪಿರಿಯಾಪಟ್ಟಣ<br>ಮೈಸೂರು (ಕಾರ್ಪೋರೇಷನ್ ಪರಿಮಿತಿ ಹೊರತಾಗಿ)<br>ಕೃಷ್ಣರಾಜನಗರ | ಮೈಸೂರು, (ಕಾರ್ಪೋರೇಷನ್ ಪರಿಮಿತಿ) |

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ತಾಲೂಕುಗಳ ಸಂಖ್ಯೆ | ವಲಯ-೧ ಅತ್ಯಂತ ಹಿಂದುಳಿದ ತಾಲೂಕುಗಳು | ವಲಯ-೨ ಅತಿ ಹಿಂದುಳಿದ ತಾಲೂಕುಗಳು | ವಲಯ-೩ ಹಿಂದುಳಿದ ತಾಲುಕುಗಳು | ವಲಯ-೪ ಕೈಗಾರಿಕೆಯಲ್ಲಿ ಮುಂದಿರಿದ ತಾಲುಕುಗಳು |
|---|---|---|---|---|---|---|
| ೧೭ | ಉಡುಪಿ | ೩ | | | ಉಡುಪಿ<br>ಕುಂದಾಪುರ<br>ಕಾರ್ಕಳ | |
| | ಉತ್ತರ ಕರ್ನಾಟಕ ಪ್ರದೇಶ | | | | | |
| ೧೮ | ಬಳ್ಳಾರಿ | ೭ | ಸಂಡೂರು,<br>ಕೂಡ್ಲಿಗಿ | ಸಿರಗುಪ್ಪ<br>ಹಗರಿಬೊಮ್ಮನ-ಹಳ್ಳಿ, ಹಡಗಲಿ | ಬಳ್ಳಾರಿ<br>ಹೊಸಪೇಟೆ | |
| ೧೯ | ಬೀದರ್ | ೫ | ಭಾಲ್ಕಿ<br>ಹುಮ್ನಾಬಾದ್<br>ಬಸವಕಲ್ಯಾಣ<br>ಔರಾದ್ | | ಬೀದರ್ | |
| ೨೦ (ಎ) | ಗುಲ್ಬರ್ಗ | ೦೭ | ಸೇಡಂ<br>ಚಿತಾಪುರ್<br>ಅಫ್ಜಲ್ ಪುರ<br>ಅಳಂದ್<br>ಚಿಂಚೋಳಿ<br>ಜೇವರ್ಗಿ | | ಗುಲ್ಬರ್ಗ | |
| ೨೦ (ಬಿ) | ಯಾದಗೀರ್ | ೦೩ | ಶೋರಾಪುರ<br>ಶಾಹಪುರ್<br>ಯಾದ್ಗಿರ್ | | | |
| ೨೧ | ಕೊಪ್ಪಳ | ೪ | ಕುಷ್ಟಗಿ<br>ಯೆಲ್ಬುರ್ಗ | ಕೊಪ್ಪಳ | ಗಂಗಾವತಿ | |
| ೨೨ | ರಾಯಚೂರು | ೫ | ಸಿಂಧನೂರು<br>ಮಾನ್ವಿ<br>ಲಿಂಗಸುಗೂರು<br>ದೇವದುರ್ಗ | ರಾಯಚೂರು | | |
| ೨೩ | ಬಾಗಲಕೋಟೆ | ೬ | ಬೀಳಗಿ | ಹುನಗುಂದ್<br>ಬದಾಮಿ | ಬಾಗಲಕೋಟೆ<br>ಮುಧೋಳ<br>ಜಮಖಂಡಿ | |
| ೨೪ | ಬೆಳಗಾವಿ | ೧೦ | | ಅಥಣಿ<br>ಗೋಕಾಕ<br>ಸವದತ್ತಿ | ಬೆಳಗಾವಿ<br>ಖಾನಾಪುರ<br>ಹುಕ್ಕೇರಿ<br>ರಾಮದುರ್ಗ<br>ಬೈಲಹೊಂಗಲ<br>ಚಿಕ್ಕೋಡಿ<br>ರಾಯಬಾಗ್ | |

| ಕ್ರಮ ಸಂಖ್ಯೆ | ಜಿಲ್ಲೆ | ಒಟ್ಟು ತಾಲೂಕುಗಳ ಸಂಖ್ಯೆ | ವಲಯ-೧ ಅತ್ಯಂತ ಹಿಂದುಳಿದ ತಾಲೂಕುಗಳು | ವಲಯ-೨ ಅತಿ ಹಿಂದುಳಿದ ತಾಲೂಕುಗಳು | ವಲಯ-೩ ಹಿಂದುಳಿದ ತಾಲೂಕುಗಳು | ವಲಯ-೪ ಕೈಗಾರಿಕೆಯಲ್ಲಿ ಮುಂದಿರುವ ತಾಲೂಕುಗಳು |
|---|---|---|---|---|---|---|
| ೨೫ | ಬಿಜಾಪುರ | ೫ | ಮುದ್ದೆ ಬಿಹಾಳ<br>ಬಸವನ-ಬಾಗೇವಾಡಿ,<br>ಇಂಡಿ, ಸಿಂದಗಿ | | ಬಿಜಾಪುರ | |
| ೨೬ | ಧಾರವಾಡ | ೫ | | ಕಲಘಟಗಿ | ಧಾರವಾಡ<br>ಹುಬ್ಬಳ್ಳಿ<br>ಕುಂದಗೋಳ<br>ನವಲಗುಂದ | |
| ೨೭ | ಗದಗ | ೫ | | ಮುಂಡರಗಿ | ಗದಗ<br>ನರಗುಂದ<br>ರೋಣ, ಶಿರಹಟ್ಟಿ | |
| ೨೮ | ಹಾವೇರಿ | ೭ | | ಸವಣೂರು<br>ಶಿಗ್ಗಾಂ<br>ಹಿರೆಕೆರೂರು | ಹಾವೇರಿ,<br>ರಾಣಿಬೆನ್ನೂರು<br>ಬ್ಯಾಡಗಿ<br>ಹಾನಗಲ್ | |
| ೨೯ | ಉತ್ತರಕನ್ನಡ | ೧೧ | | ಸೂಪಾ, ಭಟ್ಕಳ | ಕಾರವಾರ<br>ಹಳಿಯಾಳ<br>ಶಿರಸಿ<br>ಮುಂಡಗೋಡು<br>ಯೆಲ್ಲಾಪುರ<br>ಹೊನ್ನಾವರ<br>ಅಂಕೋಲ<br>ಸಿದ್ದಾಪುರ<br>ಕುಮಟಾ | |
| | ಒಟ್ಟು | ೧೭೬ | ೩೯ | ೪೦ | ೮೫ | ೧೨ |

## ಅನುಬಂಧ-2

2009-14ರ ಕೈಗಾರಿಕಾ ನೀತಿಯನ್ವಯ ಸಾಲದ ಪತ್ರಗಳ ಬಗ್ಗೆ ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯಿತಿ ದೃಢೀಕರಣ ಪತ್ರದ ನಮೂನೆ.

## ಪ್ರಮಾಣ ಪತ್ರ

**ವಿಷಯ** : ________________..ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ**:1.ಸರ್ಕಾರಿ ಆದೇಶ ಸಂಖ್ಯೆ:ಸಿಐ/233/ಎಸ್‌ಪಿಐ/2008 ದಿನಾಂಕ: 28.2.2009 ಮತ್ತು 25.2.2010.
2.ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ:ಕಂ.ಇ/ /ಮುಸೋಮು/2009 ದಿನಾಂಕ:_____
3.ಮೆ:_______________ರವರ ಪತ್ರ ಸಂಖ್ಯೆ:____________ದಿನಾಂಕ: _______

******

(i) ಮೆ: ______________________ನ ಮಾಲೀಕರಾದ / ಪಾಲುದಾರರಾದ / ವ್ಯವಸ್ಥಾಪಕ ನಿರ್ದೇಶಕರಾದ / ನಿರ್ದೇಶಕರಾದ ಶ್ರೀ _______________ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಹೊಸ ಕೈಗಾರಿಕಾ ಘಟಕವಾಗಿದ್ದು/ವಿಸ್ತರಣೆ/ನವೀಕರಣ/ವೈವಿಧ್ಯೀಕರಣ ಕೈಗೊಂಡಿದ್ದು; ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ /ಭಾರತ ಸರ್ಕಾರದ ಪತ್ರ ಸಂಖ್ಯೆ: __________. ದಿನಾಂಕ: ________ ರಂತೆ IEM/IL ನ್ನು ಪಡೆದಿರುತ್ತದೆ.

(ii) ಈ ಘಟಕವು 2009-14ನೇ ಸಾಲಿಗೆ ಸರ್ಕಾರವು ಹೊರಡಿಸಿರುವ ನೂತನ ಕೈಗಾರಿಕಾ ನೀತಿ ಸಂಖ್ಯೆ: ಸಿಐ/233/ಎಸ್‌ಪಿಐ/2009 ಬೆಂಗಳೂರು ದಿನಾಂಕ: 28-02-2009 ರ ಪ್ರಕಾರ ಕೈಗಾರಿಕೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ____ ರಲ್ಲಿ ಸ್ಥಾಪಿತಗೊಂಡಿದ್ದು; ಮೆಗಾ ಯೋಜನೆ / ದೊಡ್ಡ / ಮಧ್ಯಮ / ಸಣ್ಣ / ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಉದ್ಯಮಕ್ಕೆ __________ (ಸಾಲ ನೀಡುವ ಬ್ಯಾಂಕ್)/ಸಂಸ್ಥೆ ವಿವರ ನೀಡುವುದು) ರವರು ರೂ______ ಅವಧಿ ಸಾಲವನ್ನು ರೂ__________ ಯೋಜನಾ ವೆಚ್ಚದಲ್ಲಿ _____________. ಉತ್ಪನ್ನವನ್ನು ತಯಾರಿಸಲು ಮಂಜೂರು ಮಾಡಿರುತ್ತದೆ.

(iv) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು DLSWCC/SLSWCC/SHLCC ರವರು ದಿ:______.. ರಂದು ನಡೆದ ಇವರ _____ ಸಭೆಯಲ್ಲಿ ಅನುಮೋದಿಸಿರುತ್ತಾರೆ.

(v) ಈ ಉದ್ಯಮವು ಅವಧಿ ಸಾಲ ಪಡೆಯುವ ಹಿನ್ನೆಲೆಯಲ್ಲಿ ಸಾಲ ಕರಾರು/ಕ್ರೆಡಿಟ್ ಡೀಡ್/ಅಡಮಾನ/ ಬಾಡಿಗೆ ಪತ್ರಗಳ ಮುದ್ರಾಂಕ ಶುಲ್ಕದಲ್ಲಿ ಶೇ. 100 / 75 ರಷ್ಟು ರಿಯಾಯಿತಿ ಹಾಗೂ ನೋಂದಣಿಯಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/-ಕ್ಕೆ ರೂ.1/-ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

(vi) 2009-2014ನೇ ಸಾಲಿನ ಸರ್ಕಾರದ ನೂತನ ಕೈಗಾರಿಕಾ ನೀತಿ ಅನ್ವಯ ಕೈಗಾರಿಕೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನೊಳಗೊಂಡ ಸರ್ಕಾರಿ ಆದೇಶ ಸಂಖ್ಯೆ: ಸಿಐ/233/ಎಸ್‌ಪಿಐ/2009 ಬೆಂಗಳೂರು ದಿನಾಂಕ:28-2-2009ರ ಅನುಬಂಧ-4ರಲ್ಲಿ ನಮೂದಿಸಿರುವ ಉತ್ತೇಜನ ಮತ್ತು ರಿಯಾಯಿತಿ ಗಳಿಗೆ ಅನರ್ಹವಾಗಿರುವ 25 ವಿವಿಧ ಕೈಗಾರಿಕೆಗಳಲ್ಲಿ ಈ ಘಟಕವು ಸೇರಿರುವುದಿಲ್ಲವೆಂದು ದೃಢೀಕರಿಸಿದೆ.

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ,____
ಅಥವಾ
ಜಂಟಿ ನಿರ್ದೇಶಕರು (ಕೈಅ), ಕೇಂದ್ರ ಕಚೇರಿ, ಬೆಂಗಳೂರು.

## ಅನುಬಂಧ-3

2009-14ರ ಕೈಗಾರಿಕಾ ನೀತಿಯನ್ವಯ ಕೈಗಾರಿಕಾ ನಿವೇಶನ/ಮಳಿಗೆ ಖರೀದಿ ಪತ್ರಗಳ ಬಗ್ಗೆ ನೊಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕ ರಿಯಾಯ್ತಿ ದೃಢೀಕರಣ ಪತ್ರದ ನಮೂನೆ.

## ಪ್ರಮಾಣ ಪತ್ರ

**ವಿಷಯ** : ________________..ರವರಿಗೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ರಿಯಾಯಿತಿ ದೃಢೀಕರಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:**1.ಸರ್ಕಾರಿ ಆದೇಶ ಸಂಖ್ಯೆ:ಸಿಐ/233/ಎಸ್‌ಪಿಐ/2008 ದಿನಾಂಕ: 28.2.2009 ಮತ್ತು 25.2.2010.
2.ಕಂದಾಯ ಇಲಾಖೆ ಅಧಿಸೂಚನೆ ಸಂಖ್ಯೆ:ಕಂ.ಇ/ /ಮುನೋಮು/2009 ದಿನಾಂಕ:_____
3.ಮೆ:______________ರವರ ಪತ್ರ ಸಂಖ್ಯೆ:__________ದಿನಾಂಕ: ______
4. __________ರವರು ಸದರಿ ಘಟಕಕ್ಕೆ ನೀಡಿರುವ ಅಲಾಟ್‌ಮೆಂಟ್ ಪತ್ರ ಸಂ:_---ದಿ: ---

*************

(i) ಮೆ: ______________________ನ ಮಾಲೀಕರಾದ / ಪಾಲುದಾರರಾದ /ವ್ಯವಸ್ಥಾಪಕ ನಿದೇಶಕರಾದ / ನಿರ್ದೇಶಕರಾದ ಶ್ರೀ: _______________ರವರು ಪ್ರತಿನಿಧಿಸುತ್ತಿದ್ದು, ಈ ಘಟಕವು ಹೊಸ ಕೈಗಾರಿಕಾ ಘಟಕವಾಗಿದ್ದು/ವಿಸ್ತರಣೆ/ನವೀಕರಣ/ವೈವಿಧ್ಯೀಕರಣ ಕೈಗೊಂಡಿದ್ದು; ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ/ಭಾರತ ಸರ್ಕಾರದ ಪತ್ರ ಸಂಖ್ಯೆ: ______ದಿನಾಂಕ: _____ರಂತೆ IEM/IL ನ್ನು ಪಡೆದಿರುತ್ತದೆ.

(ii) ಈ ಘಟಕವು 2009-14ನೇ ಸಾಲಿಗೆ ಸರ್ಕಾರವು ಹೊರಡಿಸಿರುವ ನೂತನ ಕೈಗಾರಿಕಾ ನೀತಿ ಸಂಖ್ಯೆ: ಸಿಐ/233/ಎಸ್‌ಪಿಐ/2009 ಬೆಂಗಳೂರು ದಿನಾಂಕ: 28-02-2009 ರ ಪ್ರಕಾರ ಕೈಗಾರಿಕೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳಂತೆ ವಲಯ____ ರಲ್ಲಿ ಸ್ಥಾಪಿತಗೊಂಡಿದ್ದು; ಮೆಗಾ ಯೋಜನೆ / ದೊಡ್ಡ / ಮಧ್ಯಮ / ಸಣ್ಣ / ಸೂಕ್ಷ್ಮ ಉದ್ಯಮ ಎಂದು ದೃಢೀಕರಿಸಿದೆ.

(iii) ಈ ಉದ್ಯಮಕ್ಕೆ ಕೆಐಎಡಿಬಿ/ಕೆಎಸ್‌ಎಸ್‌ಐಡಿಸಿ/ಕಿಯೋನಿಕ್ಸ್/ಕೆಎಸ್‌ಐಐಡಿಸಿ/ಇಂಡಸ್ಟ್ರಿಯಲ್ ಕೋ ಅಪರೇಟಿವ್ ಸೊಸೈಟಿ / ಅನುಮೋದಿತ ಕೈಗಾರಿಕಾ ಪ್ರದೇಶದವರಿಂದ _____ಚ.ಮೀ / ___ ಎಕರೆ ಮಳಿಗೆ/ನಿವೇಶನ/ ಟೆನಮೆಂಟನ್ನು ___ ಉತ್ಪನ್ನವನ್ನು ತಯಾರಿಸಲು ಹಂಚಿಕೆ ಮಾಡಿರುತ್ತದೆ. ಅಥವಾ ಘಟಕವು ಕೆಎಲ್‌ಆರ್ ಕಾಯ್ದೆ ನಿಯಮ 109ರಡಿ __ ಎಕರೆ ಜಮೀನು ಖರೀದಿಸಿರುತ್ತದೆ ಅಥವಾ ---- ರಿಂದ ---ಎಕರೆ ಪರಿವರ್ತಿತ ಭೂಮಿಯನ್ನು ಡಿಎಲ್‌ಎಸ್‌ಡಬ್ಲ್ಯೂಸಿಸಿ / ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ/ ಎಸ್‌ಹೆಚ್‌ಎಲ್‌ಸಿಸಿ ಅನುಮೋದನೆಯಂತೆ ಖರೀದಿಸಿರುತ್ತದೆ.

(iv) ಈ ಘಟಕದ ಪ್ರಸ್ತಾಪಿತ ಯೋಜನೆಯನ್ನು DLSWCC/SLSWCC/SHLCC ರವರು ದಿ:_____.. ರಂದು ನಡೆದ ಇವರ __________ ಸಭೆಯಲ್ಲಿ ಅನುಮೋದಿಸಿರುತ್ತಾರೆ.

(v) ಈ ಮೇಲ್ಕಂಡ ಕ್ರ.ಸಂ: (iii)ರಂತೆ ಈ ಉದ್ಯಮವು ನಿವೇಶನ/ಮಳಿಗೆ/ಟೆನಮೆಂಟ್‌ನ ಲೀಸ್-ಡೀಡ್/ಲೀಸ್-ಕಂ-ಸೇಲ್ ಡೀಡ್ / ಶುದ್ಧಕ್ರಯ ಪತ್ರ ಪಡೆಯುವ ಹಿನ್ನೆಲೆಯಲ್ಲಿ ಮುದ್ರಾಂಕ ಶುಲ್ಕದಲ್ಲಿ ಶೇ. 100 / 75 ರಷ್ಟು ರಿಯಾಯ್ತಿ ಹಾಗೂ ನೋಂದಣಿಯಲ್ಲಿ ದಸ್ತಾವೇಜು ಮೌಲ್ಯದ ಪ್ರತಿ ರೂ. 1000/-ಕ್ಕೆ ರೂ.1/-ನ್ನು ಮಾತ್ರ ಪಾವತಿಸಲು ಅರ್ಹರಿರುವುದಾಗಿ ದೃಢೀಕರಿಸಿದೆ.

(vi) 2009-2014ನೇ ಸಾಲಿನ ಸರ್ಕಾರದ ನೂತನ ಕೈಗಾರಿಕಾ ನೀತಿ ಅನ್ವಯ ಕೈಗಾರಿಕೆಗಳಿಗೆ ನೀಡಲಾಗುವ ಉತ್ತೇಜನಗಳು ಮತ್ತು ರಿಯಾಯಿತಿಗಳನ್ನೊಳಗೊಂಡ ಸರ್ಕಾರಿ ಆದೇಶ ಸಂಖ್ಯೆ: ಸಿಐ/233/ಎಸ್‌ಪಿಐ/2009 ಬೆಂಗಳೂರು ದಿನಾಂಕ:28-2-2009ರ ಅನುಬಂಧ-4ರಲ್ಲಿ ನಮೂದಿಸಿರುವ ಉತ್ತೇಜನ ಮತ್ತು ರಿಯಾಯಿತಿ ಗಳಿಗೆ ಅನರ್ಹವಾಗಿರುವ 25 ವಿವಿಧ ಕೈಗಾರಿಕೆಗಳಲ್ಲಿ ಈ ಘಟಕವು ಸೇರಿರುವುದಿಲ್ಲವೆಂದು ದೃಢೀಕರಿಸಿದೆ.

ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ,____ಜಿಲ್ಲೆ
ಅಥವಾ
ಜಂಟಿ ನಿರ್ದೇಶಕರು (ಕೈಅ), ಕೈವಾಇ, ಕೇಂದ್ರ ಕಚೇರಿ, ಬೆಂಗಳೂರು

## ಅನುಬಂಧ – 4

## ಉತ್ತೇಜನ ಮತ್ತು ರಿಯಾಯತಿಗಳಿಗೆ ಅನರ್ಹವಾದ ಕೈಗಾರಿಕಾ ಚಟುವಟಿಕೆಗಳು

| ಕ್ರಮ ಸಂಖ್ಯೆ | ಚಟುವಟಿಕೆಗಳು |
|---|---|
| ೧ | ವೈನರಿ ಹೊರತಾದ ಮದ್ಯ ತಯಾರಿಸುವ ಮತ್ತು ಭಟ್ಟಿ ಇಳಿಸುವ ಎಲ್ಲಾ ವಿಧದ ಘಟಕಗಳು |
| ೨ | ಕಾಕಂಬಿ / ರೆಕ್ಟಿಫೈಡ್ ಸ್ಪಿರಿಟ್ /ಡಿನೇಚರ್ಡ್ ಸ್ಪಿರಿಟನ್ನು ಕಚ್ಚಾಮಾಲನ್ನಾಗಿ ಉಪಯೋಗಿಸುವ ಪಾನಯೋಗ್ಯ ಆಲ್ಕೋಹಾಲ್‌ಗಳನ್ನು ತಯಾರಿಸುವ ಘಟಕಗಳು |
| ೩ | ಖಂಡಸಾರಿ ಮತ್ತು ಬೆಲ್ಲ ತಯಾರಿಸುವ ಘಟಕಗಳು |
| ೪ | ಫೋಟೋ ಸ್ಟುಡಿಯೋ ಮತ್ತು ವರ್ಣಸಂಸ್ಕರಣ ಕೇಂದ್ರಗಳು |
| ೫ | ಫೋಟೋಕಾಪಿ ಮತ್ತು ಝೆರಾಕ್ಸ್ ಯಂತ್ರಗಳು |
| ೬ | ರಾಸಾಯನಿಕ ಗೊಬ್ಬರಗಳ ಸಂಮಿಶ್ರಣ ಘಟಕಗಳು |
| ೭ | ಮೂಲಔಷಧಿ/ತಯಾರಿಸಿದ ಔಷಧಿ/ರಾಸಾಯನಿಕ ವಸ್ತುಗಳನ್ನು ಯಾವುದೇ ಸಂಸ್ಕರಣೆ/ಮೌಲ್ಯ ವರ್ಧನೆ ಇಲ್ಲದೆ ಕೇವಲ ಮರು ಪ್ಯಾಕಿಂಗ್ ಮಾಡುವುದು |
| ೮ | ಮರಮಟ್ಟು ಸೀಗಿಯುವ ಕಾರ್ಖಾನೆ |
| ೯ | ಬೀಡಿ, ಸಿಗರೇಟು, ಗುಟ್ಕ ಮತ್ತು ತಂಬಾಕು ಆಧಾರಿತ ಉತ್ಪನ್ನಗಳು |
| ೧೦ | ಆರ್ಗೋಂಟಿಕ್ ಮತ್ತು ರಿಯಾಕ್ಟಿವ್ ಬಣ್ಣಗಳು |
| ೧೧ | ಸುಡುಮದ್ದುಗಳು/ ಪಟಾಕಿಗಳು |
| ೧೨ | ಒರೋಣ್ ಹಾನಿಗೊಳಿಸುವ ವಸ್ತುಗಳನ್ನು ಉಪಯೋಗಿಸಿ ತಯಾರಿಸುವ ಉತ್ಪನ್ನಗಳು |
| ೧೩ | ವಿದ್ಯುತ್ ಲಾಂತ್ರಿಗಳು |
| ೧೪ | ಸಿಮೆಂಟ್ ಹಾಲೋಬ್ಲಾಕ್/ವೈರ್ ಕಟ್/ ಫ್ಲೈಆಶ್ ಮತ್ತು ರಿಫ್ರಾಕ್ಟರಿ ಇಟ್ಟಿಗೆಗಳ ಹೊರತಾದ ಇಟ್ಟಿಗೆ ತಯಾರಿಸುವ ಉದ್ಯಮ |
| ೧೫ | ಹ್ಯಾಚರಿ ಹೊರತಾದ ಕೋಳಿಸಾಕಣೆ ಉದ್ಯಮ |
| ೧೬ | ಪಾಪ್ ಕಾರ್ನ್, ಐಸ್ ಕ್ರೀಮ್, ಕುಲ್ಫಿ, ಮತ್ತು ಐಸ್ ಕ್ಯಾಂಡಿ ತಯಾರಿಕಾ ಘಟಕಗಳು |
| ೧೭ | ಕಾಫಿ ಬೀಜ ಹುರಿಯುವುದು ಮತ್ತು ಪುಡಿಮಾಡುವುದು |
| ೧೮ | ಗಡಿಯಾರ ಮತ್ತು ಕೈಗಡಿಯಾರ ರಿಪೇರಿ |
| ೧೯ | ಶ್ರಾವ್ಯ ಮತ್ತು ದೃಶ್ಯ ಕ್ಯಾಸೆಟ್ ಧ್ವನಿಮುದ್ರಣ |
| ೨೦ | ಸಯನೈಡ್ |
| ೨೧ | ಗಣಿಗಾರಿಕೆ |
| ೨೨ | ಸುಣ್ಣದ ಗೂಡು ಮತ್ತು ಸುಣ್ಣಸುಡುವಿಕೆ |
| ೨೩ | ಹೋಟೆಲ್ ಮತ್ತು ಮೋಟೆಲ್‌ಗಳು |
| ೨೪ | ಕ್ಷ-ಕಿರಣ ಕ್ಲಿನಿಕ್/ಕ್ಲಿನಿಕಲ್/ ರೋಗತಪಾಸಣಾ ಪ್ರಯೋಗಾಲಯ/ ಮತ್ತು ಸ್ಕಾನಿಂಗ್, ಎಮ್ ಆರ್ ಐ ಪರೀಕ್ಷೆಗಳು |
| ೨೫ | ಬೋರ್‌ವೆಲ್ ರಿಗ್‌ಗಳು, ಕಾಂಕ್ರೀಟ್ ಮಿಶ್ರಣ ಯಂತ್ರಗಳು, ಉಷ್ಣಮಿಶ್ರಣ ಯಂತ್ರಗಳು, ಯೋಜನಾ ಸ್ಥಳದಲ್ಲಿ ಕೆಲಸಮಾಡುವ ಯಂತ್ರ ಸ್ಥಾವರಗಳು ಮೊದಲಾದ ಚಲನಶೀಲ ಘಟಕಗಳು. |